Reg No. B G 158

4-3-1969

52 nd Year of Publication

SATYAVADI Daily, MYSORE 4

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ತರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಆಕಾಶವಾಣಿ ಬಗ್ಗೆ ಇನ್ನೂ ತೀರ್ಮಾನವಿಲ್ಲ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಸ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ. ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮಸಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗಸೂರು) ರವರೂ ಶುಭಾಶಯಪೂರ್ವಕ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಅವರ ಪ್ರಾತ್ಸಗಳಂತೆ ಸೀಘ್ರ ಸಹಕರಿಸಬೇಕಾಗಿ ವಿನಂತಿಸಿ, ಈತ್ತೇರುವೆವೆಂದು ಆಶಿಸಿ, ಕೃತಜ್ಞತಾಪೂರ್ವಕ ವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಭಾರಿ ಅಲೋಯನ್ಸ್

ಬೆಂಗಳೂರು— ಧಾರವಾಡದ ಆಸಿಸ್ಟೆಂಟ್ ಕಮಿಷನರಿಗೆ, ಮುಖ್ಯಮಂತ್ರಿಗಳಿಗಿಂತಲೂ ಹೆಚ್ಚು ವೇತನ ಭತ್ಯೆ ಜೊರೆಯುತ್ತಿರುವುದೆಂದು ವಿಧಾನ ಪರಿಷತ್ತಿನಲ್ಲಿ ಜನ ಸಂಘದ ಶ್ರೀ ವೈ ಎಸ್ ಪಾಟೀಲರು ಆಸಾದಿಸಿದರು.

ವಿವಾಹ ವಯಸ್ಸು

ನವದೆಹಲಿ— ವಿವಾಹ ವಯಸ್ಸನ್ನು ಪುರುಷರಿಗೆ 21 ಮಹಿಳೆಯರಿಗೆ 18 ಕ್ಕೆ ಹೆಚ್ಚಿಸಬೇಕೆಂಬ ಕೇಂದ್ರದ ಯೋಚನೆಗೆ 6 ರಾಜ್ಯಗಳು ಒಪ್ಪಿವೆ — ಅಸ್ಸಾಂ, ಹರಿಯಾಣಾ 20 ಮತ್ತು 19 ಕ್ಕೂ, ಕೇರಳ 25 ಮತ್ತು 20 ಕ್ಕೆ ಹೆಚ್ಚಿಸಲು ಸಲಹೆ ನೀಡಿವೆ.

★

ಗಲಭೆಯಲ್ಲಿ ಸೊಂದವರಿಗೆ

ಬೆಂಗಳೂರು—ಪ್ರಧಾನಿಯವರಿಗೆ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಬರೆದಿದ್ದುದಕ್ಕೆ, ನಾಗರೀಕರ ಗಲಭೆಗಳಲ್ಲಿ ಸಂತ್ರಸ್ತರಿಗೆ ಪರಿಹಾರ ಕೊಡುವ ವಿಷಯ ಏನೂ ವ್ಯವಸ್ಥೆಯಿಲ್ಲವೆಂದು ತಿಳಿಸಿರುವರು — ಮಹಾರಾಷ್ಟ್ರ ಅನೇಕ ಕೇಂದ್ರ ಸರಕಾರ ನೌಂದ ಕನ್ನಡಿಗರಿಗೆ ಪರಿಹಾರವನ್ನು ಮುಖ್ಯಮಂತ್ರಿಗಳು ಕೇಳಿದ್ದರು — ಮಹಾರಾಷ್ಟ್ರ ಸರಕಾರ ನೊಂದವರಿಗೆ ನೆರವು ನೀಡಲಿರುವುದೆಂದೂ ತಿಳಿಸಿದೆವರು.

ಇಟ್ಟಿಗೆ ಮೇಲಿನ ಗುರುತು

ನವದೆಹಲಿ— ಇಲ್ಲಿಯ ಇಟ್ಟಿಗೆ ತಯಾರಿಸುವವರು ಇಟ್ಟಿಗೆ ಮೇಲೆ ಹಾಕುತ್ತಿದ್ದ ಗುರುತನ್ನು ಇಂಗ್ಲೀಷಿನಿಂದ ಹಿಂದಿಗೆ ಬದಲಾಯಿಸಿದರು.

★

ಮೌನ

ತ್ರಿವೇಂದ್ರ— ಮೈನಾಡಿನ ದೌರ್ಜನ್ಯಗಳಿಗೆ ಚೀನಾ ರಾಯಭಾರಿ ಕಚೇರಿಯಿಂದ ಹಣ ಬರುತ್ತಿರುವುದೇ ಎಂಬ ಪ್ರಶ್ನೆಗೆ ಮುಖ್ಯಮಂತ್ರಿ ನಂಬೂದರಿಪಾದರು ಮೌನ ದಿಂದಿದ್ದರು.

○

ವಿದ್ಯಾರ್ಥಿಗಳಲ್ಲಿ ಹೊಡೆದಾಟ

ರಾಯಪುರ— ಸರಕಾರಿ ಆಯುರ್ವೇದ ಕಾಲೇಜು ಹಾಸ್ಟಲ್ಲಿನಲ್ಲಿ ಎರಡು ತಂಡದ ವಿದ್ಯಾರ್ಥಿಗಳಲ್ಲಿ ಆದ ಹೊಡೆದಾಟದಲ್ಲಿ ಒಬ್ಬ ಸತ್ತು ಒಬ್ಬ ತೀವ್ರ ಗಾಯಗೊಂಡನು

ಆಕ್ಟ್ರಾಯ್

ಬೆಂಗಳೂರು— ಆಕ್ಟ್ರಾಯ್ ವಜಾ ಬಗ್ಗೆ ಸರಕಾರ ಇನ್ನೂ ನಿರ್ಧರಿಸಿಲ್ಲವೆಂದು ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು.

★

ಸಂಸ್ಕೃತ

ಉಡುಪಿ — ಸಂಸ್ಕೃತವು ಎಲ್ಲಾ ಭಾಷೆಗಳ ತಾಯಿಯೆಂದೂ, ಅದನ್ನು ಕಲಿಯಬೇಕೆಂದೂ ರೋಟರಿ ಗೌರ್ನರ್ ಶ್ರೀ ರಮೇಶ್ ಪೈ ಹೇಳಿದರು.

●

457 ಮಾತ್ರ ಖರ್ಚಾಗಿದೆ

ಬೆಂಗಳೂರು—ಸರಕಾರ ಪ್ರಕಟಿಸಿರುವ ವಚನ ಸಾಹಿತ್ಯ ಸಂಗ್ರಹ ಗ್ರಂಥದ 25 ಸಾವಿರ ಪ್ರತಿಗಳಲ್ಲಿ 457 ಮಾತ್ರ ಖರ್ಚಾಗಿವೆಯೆಂದೂ, ಇದರ ಬೆಲೆ ರೂ. 4-50 ಎಂದೂ ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು.

●

ಅಮೂಲ್ಯ ಮುತ್ತು

ಪ್ರಪಂಚದ ಅತಿ ಪ್ರಖ್ಯಾತ 'ಲಾ ಸೆರಿನಾ' ಮುತ್ತು ಕಳೆದ ತಿಂಗಳಲ್ಲಿ ನ್ಯೂಯಾರ್ಕಿನಲ್ಲಿ ರೂ. 276500 ಕ್ಕೆ ಮಾರಾಟವಾಯಿತು.

○

ಅದ್ಭುತ ವಜ್ರ

ಚಿಕಾಗೊ— ವಿಶ್ವದ ಪ್ರಖ್ಯಾತ ವಜ್ರಗಳಲ್ಲಿ ಒಂದಾದ 'ಐಡಲ್ಸ್ ಐ" ಗೆ ಒಂದು ಮಿಲಿಯ ಡಾಲರುಗಳ ಬೆಲೆ.

★

ರಾಣಿ ಅಣ್ಣಾ ದೊರೈ

ಮದ್ರಾಸು— ಶ್ರೀ ಅಣ್ಣಾ ದೊರೈ ನಿಧನದಿಂದ ವಿಧಾನಸಭೆಯಲ್ಲಿ ಖಾಲಿಯಾದ ಸ್ಥಾನಕ್ಕೆ ಅವರ ಪತ್ನಿ ಶ್ರೀಮತಿ ರಾಣಿ ಅಮ್ಮಾಳ್ ಸ್ಪರ್ಧಿಸುವರು.

ಆಹ್ಲಾದಕರ ಸುವಾಸನೆ

ಮೈಸೂರು ಗಂಧದ ಎಣ್ಣೆಯು ತನ್ನ ಶ್ರೇಷ್ಠತೆಯಿಂದ ಜಗದ್ವಿಖ್ಯಾತಿಯನ್ನು ಪಡೆದಿದೆ.

★

ಪರಿಶುದ್ಧವಾದ ಗಂಧದ ಎಣ್ಣೆಯು ಮೈಸೂರು ಸರ್ಕಾರದ ಸೀಲು ಮತ್ತು ಲೇಬಲ್‌ಗಳುಳ್ಳ ಸೀಸೆಗಳಲ್ಲಿ ಮಾತ್ರ ದೊರೆಯುತ್ತವೆ.

ಮೈಸೂರು ಸರಕಾರದ ಗಂಧದ ಎಣ್ಣೆ ಕಾರ್ಖಾನೆ.
ಮೈಸೂರು ಮತ್ತು ಶಿವಮೊಗ್ಗ

ಡಿಎಂಕೆಗೆ ಸೋಲು

ಮದರಾಸು— ವ್ಯವಸಾಯ ಸಂಬಂಧ ಅಧಿಕೃತ ಮಸೂದೆಗೆ ವಿರೋಧ ಪಕ್ಷ ತಂ ನ ತಿದ್ದುಪಡಿ 16–14 ವೋಟುಗಳಿಂದ ಮಂಜೂರಾಗಿ ಸರ್ಕಾರ ಸೋತಿತು.

ನಷ್ಟ

ಬೆಂಗಳೂರು— ಸರಕಾರಿ ಮಾಲೀಕತ್ವದ 6 ಕೈಗಾರಿಕಾ ಸಂಸ್ಥೆಗಳಲ್ಲಿ 67–68 ರಲ್ಲಿ ರೂ. 60 ಲಕ್ಷ ನಷ್ಟವಾಯಿತೆಂಬ ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು.

ಪ್ರತಿಭಟನಾ ಪುರವಣಿಗೆ

ಹೊಸಪೇಟೆ— ಬೊಂಬಾಯಿನಲ್ಲಿ ಕನ್ನಡಿಗರ ಮೇಲೆ ಶಿವಸೇನೆ ನಡೆಸಿದ ಅತ್ಯಾ ಚಾರ ಖಂಡಿಸಿ ವಿಜಯನಗರ ಕಾಲೇಜು ಕನ್ನಡ ವಿದ್ಯಾರ್ಥಿಗಳು ಪುರವಣಿಗೆ ನಡೆ ಸಿದರು

ಲಾಭ ನಷ್ಟ

ನವದೆಹಲಿ— 28 ಸರ್ಕಾರಿ ಕೈಗಾರಿಕೆಗಳಿಂದ 67–68 ರಲ್ಲಿ ರೂ. 84.16 ಲಕ್ಷ ನಷ್ಟವೂ, 39 ರಿಂದ ರೂ. 48.81 ಲಕ್ಷ ಲಾಭವೂ ಆಗಿರುವುದೆಂದು ಲೋಕ ಸಭೆಯಲ್ಲಿ ತಿಳಿಸಲಾಯಿತು.

ಕ್ಯಾನ್ಸರ್ ನಿಪುಣ ಕ್ಯಾನ್ಸರಿಗೇ ಆಹುತಿ

ಬೊಂಬಾಯಿ— ತಾತಾ ಮೆಮೋರಿಯಲ್ ಆಸ್ಪತ್ರೆಯಲ್ಲಿ ವಿಶ್ವಖ್ಯಾತ ಕ್ಯಾ ನ್ಸರ್ ಪರಿಣಾಮಿಗಿದ್ದ ಡಾ|| ಅರ್ನಸ್ಟ್ ಬೆಕರ್ಸ್ಟರು ಕ್ಯಾನ್ಸರು ಖಾಯಿಲೆಯಿಂದಲೇ ನಿನ್ನೆ ನಿಧನರಾದರು.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah. Sri Madhav Shenoi Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.



Protect the Cow

ವುಡ್‌ಲ್ಯಾಂಡ್ಸ್ 28-2-69 ರಿಂದ

ಅಮೋಘ ಆರಂಭ

— ಚಿತ್ತಾಕರ್ಷ ಸಾಂಸಾರಿಕ ಹಿಂದಿ ಚಿತ್ರ —

ಘರ್ ಕ ಚಿರಾಗ್

ಪಾತ್ರ— ಧರ್ಮೇಂಧರ್, ಬಿಶ್ವಜಿತ್, ವಹಿದಾ ರಹಿಮಾನ್,
ಬಾಲರಾಜ್ ಸಹಾನಿ, ದೇವ್ ಕುಮಾರ್

ನಿರ್ದೇಶನ : ಜಗದೇವ್ — ಸಂಗೀತ : ಮದನ್ ಮೋಹನ್

[ದಿನ 3 ಪ್ರದರ್ಶನಗಳು]

ಆಪೆರಾ— 28–2–69 ರಿಂದ

— ಅತ್ಯಮೋಘ ಹಿಂದಿ ಚಿತ್ರ —

ಪರಿವಾರ್

ಮನರಂಜನ ತೆರಿಗೆ ಮನ್ನಾ ಮಾಡಿದೆ ಪೂರ್ಣರಂಜಿತ

ಪಾತ್ರ : ಜಿತೇಂದ್ರ ನಂದ, ರಾಜೇಂದ್ರನಾಥ್, ಓಂ ಪ್ರಕಾಶ್

.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

SHAKTI

SUDHA

A Superb Tonic

Help The Gorakshana

ಆಶೋಕ ಪಿಚ್ಚರ್ಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

Edited, Printed & Published by Dharmapracharanirata M S Krishna Rao (Proprietor) at the Satyavad Press Chamarajapuram, Mysoe 4